ಕುಡಿಯುವ ನೀರಿನ ಘಟಕಗಳ ಸ್ಥಾಪನೆ

192(469); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ವಿಜಯಪುರ (ವಿಜಾಪುರ) ಜಿಲ್ಲೆ ಸಿಂದಗಿ ವಿಧಾನಸಭಾ ಮತಕ್ಷೇತ್ರದಲ್ಲಿ ಸ್ಥಾಪಿಸಲಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆ ಎಷ್ಟು;

ಆ) ಈ ಮತಕ್ಷೇತ್ರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಬೇಡಿಕೆ ಹೆಚ್ಚಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಯಾವ ಯಾವ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆ;

ಈ) ಶುದ್ಧ ಕುಡಿಯುವ ನೀರಿನ ಘಟಕಕ್ಕೆ ತಗಲುವ ವೆಚ್ಚವೆಷ್ಟು (ವಿವರ ನೀಡುವುದು);

ಉ) ಈಗಾಗಲೇ ಪ್ರಾರಂಭಿಸಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಪೈಕಿ ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಂಖ್ಯೆ ಎಷ್ಟು (ಗ್ರಾಮವಾರು ಘಟಕಗಳ ವಿವರ ಒದಗಿಸುವುದು)?

ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಸಿಂಧಗಿ ವಿಧಾನಸಭಾ ಮತಕ್ಷೇತ್ರದಲ್ಲಿ, 2011–12 ಹಾಗೂ 2013–14ನೇ ಸಾಲಿನಲ್ಲಿ ಒಟ್ಟು 05 ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲಾಗಿದೆ.

ಆ) ಬಂದಿದೆ.

ಇ) 21 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದ್ದು, ಪ್ರಸಕ್ತ ಸಾಲಿನ ಎರಡನೇ ಹಂತದ ನೀರು ಶುದ್ಧೀಕರಣ ಘಟಕಗಳ ಅಳವಡಿಕೆಯಲ್ಲಿ ಮಾರ್ಗಸೂಚಿಯನ್ವಯ ಪರಿಶೀಲಿಸಿ ಕ್ರಮವಹಿಸಲಾಗುವುದು.

ಈ) ಆಯಾ ತಂತ್ರಜ್ಞಾನ ಮತ್ತು ಸಾಮರ್ಥ್ಯದ ಮೇಲೆ ಅಂದಾಜು ವೆಚ್ಚ ತಿಳಿಯಲಿದೆ. ಈ ಸಂಬಂಧ KTPP ನಿಯಮಗಳನ್ವಯ ಕ್ರಮವಾಗಲಿದೆ.

ಉ) 2011–12 ಹಾಗು 2013–14ನೇ ಸಾಲಿನಲ್ಲಿ ಅಳವಡಿಸಲು ಆದೇಶಿಸಿರುವ ಒಟ್ಟು–05 ಘಟಕಗಳ ಪೈಕಿ 1.ಚಿಕ್ಕಸಿಂದಗಿ 2.ಕುಮಸಿಗಿ 3.ತಾಂಬ ಜನವಸತಿಗಳಲ್ಲಿ ಅಳವಡಿಸಲಾದ ನೀರು ಶುದ್ಧೀಕರಣ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಇನ್ನುಳಿದ 02 ಗ್ರಾಮಗಳಲ್ಲಿನ ಘಟಕಗಳ ವಸ್ತುಸ್ಥಿತಿಯನ್ನು ಈ ಕೆಳಕಂಡಂತೆ ವಿವರಿಸಿದೆ.

1) **ಹಂದಿಗನೂರು:** ಸದರಿ ಕಾಮಗಾರಿಯನ್ನು ಕೆ.ಆರ್.ಡಿ.ಸಿ.ಎಲ್ ನಿಗಮದವರು ಶೆಡ್ ನಿರ್ಮಾಣ ಮಾಡುತ್ತಿದ್ದು, ಕಾಮಗಾರಿ ಮುಕ್ತಾಯ ಹಂತದಲ್ಲಿದೆ. ಇನ್ನೂ ಶುದ್ಧೀಕರಣ ಸ್ಥಾವರ ಅಳವಡಿಸಬೇಕು.

2) **ಬಂದಾಳ:** ಘಟಕ ದುರಸ್ಥಿಯಲ್ಲಿದೆ. ಗುತ್ತಿಗೆದಾರರ ನಿರ್ವಹಣೆ ಅವಧಿಯಲ್ಲಿದ್ದು, ಕೂಡಲೇ ದುರಸ್ಥಿಗೊಳಿಸಲು ಕ್ರಮ ಕೈಗೊಂಡಿದೆ.